**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ**

**SC No.125/2023**

| | | | |
|---|---|---|---|
| ಹೆಸರು | ವಿಶ್ವನಾಥನಾಯಕ್ | ಚಾಸಾಃ13 | ಪ್ರಾಸಾಃ8 |
| ತಂದೆಯ ಹೆಸರು | ಗೋವಿಂದಪ್ಪ | | |
| ವಯಸ್ಸು | 37 ವರ್ಷ | ಸಾಕ್ಷಿಯನ್ನು ದಿಃ16.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. | |
| ಉದ್ಯೋಗ | ಪ್ರಥಮ ದರ್ಜೆ ಸಹಾಯಕರು, ಶ್ರೀನಿವಾಸಪುರ ತಾಲ್ಲೂಕು ಪಂಚಾಯಿತಿ | | |
| ವಾಸಸ್ಥಳ | ಕೊಳತೂರು ಗ್ರಾಮ, ಶ್ರೀನಿವಾಸಪುರ ತಾಲ್ಲೂಕು. | | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಸುಮಾರು 7 ವರ್ಷಗಳಿಂದ ಶ್ರೀನಿವಾಸಪುರ ತಾಲ್ಲೂಕು ಪಂಚಾಯ್ತಿಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-9 ರಿಂದ ಚಾಸಾ-12 ಮತ್ತು ಚಾಸಾ-14 ಗೊತ್ತು, ಅವರು ನಮ್ಮ ತಾಲ್ಲೂಕು ಕಚೇರಿಯಲ್ಲಿ ಕೆಲಸ ಮಾಡುವವರು.

2. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ 1ನೇ ಅರೋಪಿಯನ್ನು ಮತ್ತು ನ್ಯಾಯಾಲಯದಲ್ಲಿ ಇರುವ 2ನೇ ಅರೋಪಿಯನ್ನು ಈ ಹಿಂದೆ ನೋಡಿರುತ್ತೇನೆ.

3. ದಿಃ1.03.2023 ರಂದು ನನ್ನ ಮೇಲಾಧಿಕಾರಿಗಳು ಕೊಲೆ ಪ್ರಕರಣದಲ್ಲಿ ಪಂಚರಾಗಿ ಪೋಲಿಸ್ ಠಾಣೆಗೆ ಹೋಗಲು ಸೂಚಿಸಿದ ಮೇರೆಗೆ ನಾನು, ಚಾಸಾ-12 ಮತ್ತು ಚಾಸಾ-14 ರವರು ಶ್ರೀನಿವಾಸಪುರ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ನಾವು ಅಲ್ಲಿಗೆ ಹೋದಾಗ ಅರೋಪಿತರು ಇಬ್ಬರು ಠಾಣೆಯಲ್ಲಿ ಇದ್ದರು. ಆನಂತರ 1ನೇ ಅರೋಪಿಯು ನಮ್ಮನ್ನು, ಪೋಲಿಸರನ್ನು ತಾನು ಮೃತಳ ಒಡವೆಗಳನ್ನು ಮತ್ತು ಬ್ಯಾಟರಿಯನ್ನು ಬಚ್ಚಿಟ್ಟ ಸ್ಥಳವನ್ನು ತೋರಿಸುವುದಾಗಿ ಹೇಳಿ, ನಮ್ಮನ್ನು ಕರೆದುಕೊಂಡು ಹೋಗಿದ್ದು, ನಾವೆಲ್ಲಾರೂ ಜೀಪಿನಲ್ಲಿ

ಚೀರುವನಹಳ್ಳಿಯ ಶ್ರೀರಾಮರೆಡ್ಡಿ ರವರ ವಾಸದ ಮನೆಯ ಕಾಂಪೌಂಡ ಬಳಿ ಕರೆದುಕೊಂಡು ಹೋಗಿರುತ್ತೇನೆ. ನಾವು ಅಲ್ಲಿಗೆ ಹೋದಾಗ ಮನೆಯ ಕಾಂಪೌಂಡ್ ಒಳಗೆ ಪ್ಯಾಷನ್ ಪ್ರೋ ವಾಹನ ಸಂಖ್ಯೆ.ಕೆ.ಎ-**07**/ಅರ್-**4101** ನಿಂತಿದ್ದು, **1** ನೇ ಅರೋಪಿಯು ನಮ್ಮನ್ನು ಅದರ ಬಳಿ ಕರೆದುಕೊಂಡು ಹೋಗಿ, ಸದರಿ ವಾಹನದ ಟೂಲ್ಸ ಬಾಕ್ಸನಲ್ಲಿ ಇಟ್ಟಿದ್ದ ಎರಡು ಬಂಗಾರದ ಚೈನುಗಳನ್ನು ಮತ್ತು ಬ್ಯಾಟರಿಯನ್ನು ತೆಗೆದು ಪೋಲಿಸರಿಗೆ ನೀಡಿ, ಸದರಿ ಒಡವೆಗಳು ಮೃತಳಿಗೆ ಸಂಬಂದಪಟ್ಟವು ಎಂದು ಹೇಳಿರುತ್ತಾನೆ. ಪೋಲಿಸರು ಸದರಿ ಚೈನುಗಳನ್ನು ಪರಿಶೀಲನೆ ಮಾಡಿದಾಗ ಒಂದು ಚಿಕ್ಕ ಚೈನು ಮತ್ತು ಮತ್ತೊಂದು ದೊಡ್ಡ ಚೈನು ಅಗಿರುತ್ತದೆ. ದೊಡ್ಡ ಚೈನ್ ನಲ್ಲಿ ಎರಡು ತಾಳಿಗಳು ಮತ್ತು ಮೂರು ಗುಂಡುಗಳು ಇದ್ದು, ಚೈನು ಸ್ವಲ್ಪ ತುಂಡಾಗಿರುತ್ತದೆ. ನಂತರ ಪೋಲಿಸರು ಸದರಿ ಚೈನುಗಳನ್ನು ಮತ್ತು ಬ್ಯಾಟರಿಯನ್ನು ನಮ್ಮಗಳ ಸಮಕ್ಷಮ ಬಟ್ಟೆಯಲ್ಲಿ ಸುತ್ತಿ ಮೊಹರು ಮಾಡಿ, ಅವುಗಳನ್ನು ಹಾಗೂ ಬೈಕನ್ನು ಅಮಾನತುಪಡಿಸಿಕೊಂಡಿರುತ್ತಾರೆ ಹಾಗೂ ಸಂಜೆ **5.30** ರಿಂದ **6.30** ಗಂಟೆವರೆಗೆ ಪಂಚನಾಮೆ ಮಾಡಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಹಾಗೂ ಪೋಟೋಗಳನ್ನು ಸಹ ತೆಗೆದಿರುತ್ತಾರೆ.

**4.** ಸಾಕ್ಷಿಯು ಮಾಲು ಅಮಾನತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.**26** ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.**26**(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆ ಸಮಯದಲ್ಲಿ ತೆಗೆದ **4** ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**27** ರಿಂದ ನಿಪಿ.**30** ಎಂದು ಗುರುತಿಸಲಾಯಿತು. ಸದರಿ ಪೋಟೊಗಳಲ್ಲಿ ತಾನು, ಚಾಸಾ-**12**, ಚಾಸಾ-**14**, **1** ನೇ ಅರೋಪಿ ಮತ್ತು ಪೋಲಿಸರು ಇರುವುದಾಗಿ ನುಡಿದಿರುತ್ತಾರೆ.

**5.** ನಂತರ ನಾವೆಲ್ಲರೂ ಪೋಲಿಸ್ ಠಾಣೆಗೆ ಬಂದಿರುತ್ತೇವೆ. ಅಲ್ಲಿ ಪೋಲಿಸರು ಅಕ್ಕಸಾಲಿಗರನ್ನು ಕರೆಯಿಸಿ ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡ ಎರಡು ಚೈನುಗಳನ್ನು ಅಕ್ಕಸಾಲಿಗರ ಮೂಲಕ ಪರೀಕ್ಷೆ ಮಾಡಿಸಿರುತ್ತಾರೆ. ಸದರಿ ಒಡವೆಗಳ (ಒಂದು ಚಿಕ್ಕ ಚೈನು, ತುಂಡಾದ ದೊಡ್ಡ ಚೈನು, ಎರಡು ತಾಳಿ, ಮೂರು ಗುಂಡು) ಒಟ್ಟು ತೂಕ **75** ಗ್ರಾಂ ಇರುತ್ತದೆ. ಸದರಿ ಒಡವೆಗಳನ್ನು ಪೋಲಿಸರು ಬಟ್ಟೆಯ ಚೀಲದಲ್ಲಿ ಹಾಕಿ, ಮೊಹರು ಮಾಡಿ, ರಾತ್ರಿ **8.00** ರಿಂದ **8.30** ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ, ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಹಾಗೂ ಪೋಟೋ ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.**31** ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ.**31**(ಎ) ಎಂದು ಗುರುತಿಸಲಾಯಿತು. ಸದರಿ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಸಮಯದಲ್ಲಿ ತೆಗೆದ **4** ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.**32** ರಿಂದ ನಿಪಿ.**35** ಎಂದು ಗುರುತಿಸಲಾಯಿತು. ನಿಪಿ.**33** ಮತ್ತು ನಿಪಿ.**35** ಪೋಟೊಗಳಲ್ಲಿ ತಾನು, ಚಾಸಾ-**12**, ಚಾಸಾ-**14**, **1** ನೇ ಅರೋಪಿ, ಪೋಲಿಸರು ಮತ್ತು ಮೃತಳ ಮಗ ಇರುವುದಾಗಿ ನುಡಿದಿರುತ್ತಾರೆ.

(ಪ್ರಕರಣದ ಕಡತವನ್ನು ಪರಿಶೀಲಿಸಲಾಗಿ, ನಿಪಿ.**26** ಮತ್ತು **31** ರಲ್ಲಿ ಜಪ್ತುಪಡಿಸಿಕೊಂಡ ಬಂಗಾರದ ಅಭರಣಗಳನ್ನು ಅದರ ವಾರಸುದಾರರು ಈಗಾಗಲೇ ನ್ಯಾಯಾಲಯದ ಅದೇಶದ ಮೇರೆಗೆ ಬಿಡಿಸಿಕೊಂಡು ಹೋಗಿದ್ದು, ಬಿಡುಗಡೆಯ ವೇಳೆಯಲ್ಲಿ ಸದರಿ ಒಡವೆಗಳ ಛಾಯಾಚಿತ್ರಗಳನ್ನು ತೆಗೆಯಲಾಗಿದ್ದು, ಅದನ್ನು ಕಡತದಲ್ಲಿ ಇರಿಸಲಾಗಿರುತ್ತದೆ).

**6.** ಈ ಹಂತದಲ್ಲಿ ಒಡವೆಗಳ ಛಾಯಾಚಿತ್ರವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಸದರಿ ಒಡವೆಗಳನ್ನು ಛಾಯಾಚಿತ್ರದಲ್ಲಿ ನೋಡಿ ಗುರುತಿಸಿರುವುದರಿಂದ ಸದರಿ ಛಾಯಾಚಿತ್ರವನ್ನು ನಿಪಿ.**36** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಸ್.ಎಂ ವಕೀಲರಿಂದಃ</u>**

7. ನಮಗೆ ತಹಾಶೀಲ್ದಾರ್ ಮೇಲಾಧಿಕಾರಿ ಎಂದರೆ ಸರಿ. ಪೋಲಿಸರು ನಮ್ಮ ಮೇಲಾಧಿಕಾರಿಗಳಿಗೆ ನೀಡಿದ ಕೊರಿಕೆ ಪತ್ರ ನಮ್ಮ ಗಮನಕ್ಕೆ ಬಂದಿರುತ್ತದೆ. ಆನಂತರ ನಮ್ಮ ತಹಾಶೀಲ್ದಾರ್ ರವರು ನಮಗೆ ಮೌಖಿಕವಾಗಿ ಸೂಚಿಸಿರುತ್ತಾರೆ. ನಮ್ಮ ಕಚೇರಿಯಲ್ಲಿ ಚಲನ-ವಲನ ವಹಿ ಇರುತ್ತದೆ ಎಂದರೆ ಸರಿ. ಸದರಿ ವಹಿಯಲ್ಲಿ ನಮೂದಿಸುವುದು ಕಡ್ಡಾಯ ಎಂದರೆ ಸರಿ. ಪಂಚನಾಮೆಗೆ ಹೋಗುವ ಸಮಯದಲ್ಲಿ ನಾನು ಚಲನ-ವಲನ ವಹಿಯಲ್ಲಿ ನಮೂದಿಸಿರುವುದಿಲ್ಲ. ನಮ್ಮ ಮೇಲಾಧಿಕಾರಿಗಳಿಗೆ ಯಾವುದೇ ಕೋರಿಕೆ ಪತ್ರ ಬಂದಿಲ್ಲ ಹಾಗೂ ಅದೇ ರೀತಿ ನಮಗೆ ಪಂಚನಾಮೆಗೆ ಹೋಗುವಂತೆ ಹೇಳಿಲ್ಲ ಎಂದರೆ ಸರಿಯಲ್ಲ.

8. ನಾನು ಯಾವುದೇ ಸ್ಥಳಕ್ಕೆ ಹೋಗಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ ಅರೋಪಿತರು ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಅರೋಪಿತರನ್ನು ಇದೇ ಮೊದಲ ಬಾರಿಗೆ ನೋಡುತ್ತಿರುವುದು ಎಂದರೆ ಸರಿಯಲ್ಲ.

9. 1 ನೇ ಅರೋಪಿಯು ನಮ್ಮನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡಿಲ್ಲ ಹಾಗೂ ನಮ್ಮಗಳ ಸಮಕ್ಷಮ ಯಾವುದೇ ವಸ್ತುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದ್ವಿಚಕ್ರ ವಾಹನದಿಂದ ಯಾವುದೇ ವಸ್ತುಗಳನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ.

10. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಯಾವುದೇ ಪಂಚನಾಮೆಗಳನ್ನು ಮಾಡಿಲ್ಲ ಹಾಗೂ ಪೋಟೊಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

11. ಪೋಲಿಸರು ಅಕ್ಕಸಾಲಿಗರನ್ನು ಕರೆಯಿಸಿ ಒಡವೆಗಳನ್ನು ತೂಕ ಮಾಡಿಸಿದ್ದಾರೆ ಎಂದು ಸುಳ್ಳು ಹೇಳಿದ್ದೆನೆ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತಗೊಳಿಸಲಾಗಿದೆ. )

**ಓ.ಹೇ.ಕೇ.ಸ.ಇದೆ.**

**(ಮಾಯಣ್ಣ ಬಿ.ಎಲ್ )**
**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಕೋಲಾರ.**